ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 17th May 1973/Vaishakha 27, 1895 S.E.

The House met in the Assembly Chamber, Vidhana Soudha, at One of the Clock.

MADAM SPEAKER (Smt. K.S.NAGARATHNAMMA) in the Chair.

STARRED QUESTIONS

(to which oral Answers were given)

REPAIRS TO IRRIGATION TANKS IN SIRSI TALUK

891. Smt. RADHA BHAT (Ankola).—

Will the Minister for Public Works and Electricity be pleased to state :—

(a) the number of tanks repaired in Sirsi taluk for irrigation purposes since the last three years and expenditure incurred on them ;

(b) whether it has come to the notice of the Government that there is no water in many of the repaired tanks ; if so, the reason for the same ?

Sri H. M. CHANNABASAPPA (Minister for Public Works and Electricity).—

(a) Tanks Repaired		Expenditure incurred
1970–71	25	Rs. 65,168
1971–72	23	Rs. 66,383
1972–73	27	Rs. 97,151
	75	Rs. 2,28,702

(b) No.

ಶ್ರೀಮತಿ ರಾಧಾ ಭಟ್.—ಈ ಕೆರೆಗಳನ್ನು ಯಾವ ವಿಧಾನದಿಂದ, ಯಾವ ಉದ್ದೇಶಕ್ಕಾಗಿ ಮಾಡಿದ್ದೀರಿ, ಅದರಿಂದ ಏನು ಪ್ರಯೋಜನವಾಗಿದೆ ಎನ್ನುವ ಬಗ್ಗೆ ವರದಿ ಕೊಡುತ್ತೀರಾ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಉದ್ದೇಶ ನಾನಾ ತರಹ ಇದೆ, ಒಂದು ತರಹವಲ್ಲ, ಕೆರೆಯನ್ನು ದುರಸ್ತಿಯಲ್ಲಿ ಮಡಗಬೇಕಾದರೆ, ಯಾವ ಯಾವ ರಿಪೇರಿ ಕೆಲಸ ಯಾವ ಯಾವ ಕೆರೆಗೆ ಯಾವ ಯಾವಾಗ, ಯಾವ ಕಾಲದಲ್ಲಿ ಆಗಬೇಕು ಎನ್ನುವುದನ್ನು ನೋಡಿ ಆ ಕೆಲಸಗಳನ್ನು ಆಯಾ ಕಾಲದಲ್ಲಿ ಮಾಡುತ್ತೇನೆ.

ಶ್ರೀಮತಿ ರಾಧಾ ಭಟ್.—ನನ್ನ (ಅ) ಪ್ರಶ್ನೆಗೆ ಬಂದಿಲ್ಲ ಎಂದು ಉತ್ತರ ಹೇಳಿದ್ದೀರಿ, ಇದು ಸತ್ಯಕ್ಕೆ ದೂರವಾದ ಮಾತು ಎಂದು ನಾನು ಹೇಳುತ್ತೇನೆ. ಅನೇಕ ಕೆರೆಗಳಲ್ಲಿ ಮಳೆಗಾಲದಲ್ಲಿಯೂ ಸ್ವಲ್ಪವೂ ನೀರು ಇರುವುದಿಲ್ಲ. ಜನತೆಗೆ ಇದರಿಂದ ಯಾವ ಪ್ರಯೋಜನವೂ ಆಗದೆ ಹೋಗುತ್ತಿದೆ. ತಾವು ಸ್ವಂತ ಬಂದು ಇವುಗಳನ್ನು ನೋಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಡಬೇಕಾದ ಆಗತ್ಯವಿಲ್ಲ. ಸಿಸ್ಟಿ ತಾಲ್ಲೂಕಿನಲ್ಲಿ ಎಷ್ಟು ಮಳೆ ಬರುತ್ತದೆ ಎನ್ನುವುದನ್ನು ಲೆಕ್ಕ ಹಾಕಿ, ಎಷ್ಟು ನೀರು ನಿಲ್ಲಬಹುದು ಎನ್ನುವುದನ್ನು ನೋಡಿ ಕೆರೆಗಳನ್ನು ಕಟ್ಟುವುದು. ಮಳೆ ಬಂದ ಮೇಲೆ ಕೆರೆಗೆ ನೀರು ಬರುತ್ತದೆ, ಅದನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಂಡಾಗ, ನೀರು ಬರಿದಾಗುತ್ತದೆ, ಬೇಸಿಗೆ ಕಾಲದಲ್ಲಿ ಸಂಪೂರ್ಣವಾಗಿ ಬರಿದಾಗುತ್ತದೆ.

ಶ್ರೀಮತಿ ರಾಧಾ ಭಟ್.—ಮಳೆಗಾಲದಲ್ಲಿಯೂ ನೀರು ಇರುವುದಿಲ್ಲ, ಇದನ್ನು ಸ್ವತಃ ನಾನು ನೋಡಿದ್ದೇನೆ. ಮಳೆಗಾಲದಲ್ಲಿ ಈ ಕೆರೆಗಳನ್ನು ದುರಸ್ತಿ ಮಾಡಿದರೂ ಇದರಿಂದ ಜನತೆಗೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ತಾವೇ ಸ್ವತಃ ಬಂದು ನೋಡಬೇಕು.

ಅಧ್ಯಕ್ಷರು.—ಮಳೆಗಾಲದಲ್ಲಿ ನೀರು ನಿಲ್ಲದಿದ್ದರೆ ಏನು ಮಾಡಬೇಕು ಎಂಬುದನ್ನು ತಾವು ಹೇಳಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ತಾವು ೨,೨೮,೭೦೨ ರೂಪಾಯಿಗಳನ್ನು ಖರ್ಚು ಮಾಡಿ ೭೫ ಕೆರೆಗಳ ದುರಸ್ತಿ ಕೆಲಸವನ್ನು ನನ್ನ ಕ್ಷೇತ್ರವಾದ ಸಿಸ್ಟಿಯಲ್ಲಿ ಮಾಡಿದ್ದೀರಿ. ಆದರೆ ಇದರಿಂದಾಗಿರುವ ಪ್ರಯೋಜನ ಜೀರೋ. ನೀರು ನಿಲ್ಲದೆ ಇರತಕ್ಕ ಕೆರೆಗಳಿಗೆ ರಾಜಕೀಯ ದೃಷ್ಟಿಯಿಂದ ಕೆರೆಗಳ ರಿಪೇರಿ ಮಾಡಿ ಕಂಟ್ರಾಕ್ಟರುದಾರರಿಗೆ ದುಡ್ಡು ಕೊಡಿಸುವುದಕ್ಕೋಸ್ಕರ ಮಾಡಿರತಕ್ಕ ಕೆಲಸ. ಇದನ್ನು ತನಿಖೆ ಮಾಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಊಹಾಪೋಹಗಳಿಂದ ಹೇಳುತ್ತಿದ್ದಾರೆ, ಈ ಊಹಾಪೋಹಗಳಿಗೆ ಅವಕಾಶವಿಲ್ಲ ಎಂದು ಇಷ್ಟು ಮಾತ್ರ ತಿಳಿಸುತ್ತೇನೆ.

† Indicates that the remarks or speeches have not been revised by the member concerned.

ಶ್ರೀ ಕಾಗೋಡು ತಿಮ್ಮಪ್ಪ.—ಈ ಕೆರೆಗಳ ಏರಿಗಳು ಎನು ಇವೆ, ಅವು ನೂರಾರು ವರ್ಷಕ್ಕೂ ಮೇಲ್ಪಟ್ಟು ಹಾಕಿರತಕ್ಕವುಗಳು; ಹೊಸದಾಗಿ ಹಾಕಿರತಕ್ಕವಲ್ಲ. ಈ ಏರಿಗಳಿಂದ ನೀರು ಸೋರಿ ಹೋಗತಕ್ಕ ಪ್ರವೃತ್ತಿ ನಮ್ಮ ಮಲೆನಾಡಿನ ಕೆರೆಗಳಲ್ಲಿದೆ. ಆದ್ದರಿಂದ ತಾವು ಇಲಾಖೆಯ ಮುಖಾಂತರ, ಏರಿಗಳ ಮಧ್ಯ ಭಾಗವನ್ನು ತೆಗೆದು ಹೊಸ ಮಣ್ಣನ್ನು ತುಂಬಿಸಿ ಭದ್ರ ಪಡಿಸುವ ಕಾರ್ಯವನ್ನು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಸರಿಯಿಲ್ಲ, ಕಾರಣ ಏನಂದರೆ, ನೂರಾರು ವರ್ಷಗಳ ಹಿಂದೆ ಏರಿಯನ್ನು ಹಾಕಿದ ಮೇಲೆ, ಏರಿ ಕನ್ಸಾಲಿಡೇಟ್ ಆಗಿ ಭದ್ರವಾಗಿರುವುದರಿಂದ ನೀರು ಊಸ್ ಔಟ್ ಆಗುವುದಕ್ಕೆ ಅವಕಾಶವಿಲ್ಲ. ಸೆಪ್ಟೆಂಬರ್ ಕಡಿಮೆ ಇದ್ದ ಕಾಲದಲ್ಲಿ, ನೀರು ಊಸ್ ಔಟ್ ಆಗುತ್ತದೆ. ಅಂಥ ಕಡೆಗಳಲ್ಲಿ ಸೆಪ್ಟೆಂಬರ್ ಅನ್ನು ಸಮರ್ಪಕವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಆಂದಾನಪ್ಪ.—ಮಳೆಗಾಲದಲ್ಲಿ ಅಲ್ಲಿ ನೀರು ನಿಲ್ಲುತ್ತಾ ಇಲ್ಲ, ಇದರಿಂದ ಹಣ ದುರುಪಯೋಗವಾಗಿದೆ. ಆದ್ದರಿಂದ ಸರ್ಕಾರದವರು ಅಲ್ಲಿ ಫೀಡರ್ ಚಾನಲ್ ಅನ್ನು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರು ನಿಲ್ಲುತ್ತಾ ಇಲ್ಲ ಎನ್ನುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಸಾಕಷ್ಟು ನೀರು ನಿಲ್ಲುತ್ತದೆಯೇ ಎನ್ನುವ ಪ್ರಶ್ನೆ ಮಳೆ ಬಂದಾಗ ನೀರು ನಿಲ್ಲಲೇ ಬೇಕು. ಎಷ್ಟು ಪ್ರಮಾಣದಲ್ಲಿ ನೀರು ನಿಲ್ಲುತ್ತದೆ, ಎನ್ನುವುದರಲ್ಲಿ ಭಿನ್ನಾಭಿಪ್ರಾಯ ಇರಬಹುದು. ಮಳೆಗಾಲದಲ್ಲಿಯೂ ನೀರು ನಿಲ್ಲುವುದಿಲ್ಲ ಎನ್ನುವುದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ.

ಶ್ರೀಮತಿ ರಾಧಾ ಭಟ್.—ಕೆರೆಗಳ ದುರಸ್ತಿಗಾಗಿ ಉಪಯೋಗಿಸಿದ ಹಣ ಸರಿಯಾಗಿ ವೆಚ್ಚವಾಗದೆ ಇರುವುದರಿಂದ ಕೆರೆಗಳಲ್ಲಿ ನೀರು ನಿಲ್ಲದೆ ಇರುವುದಕ್ಕೆ ಒಂದು ಕಾರಣ. ಇದರ ಬಗ್ಗೆ ಅಧಿಕಾರಿಗಳು ಸುಳ್ಳು ಪಟ್ಟಿಯನ್ನು ಕೊಟ್ಟಿದ್ದಾರೆ. ಇಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ರಮ ತೆಗೆದುಕೊಳ್ಳಬೇಕಾದರೆ, ಹಣ ಸರಿಯಾಗಿ ಉಪಯೋಗವಾಗಿಲ್ಲ ಎನ್ನುವುದು ರುಜುವಾತಾಗಬೇಕು. ಆಮೇಲೆ ಕ್ರಮ ತೆಗೆದುಕೊಳ್ಳುವುದು, ಅಲ್ಲಿಯವರೆಗೆ ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಕೆರೆಗಳ ದುರಸ್ತಿ ವಿಷಯದಲ್ಲಿ ಕೆಲಸ ಮಾಡದೇನೇ ಬಿಲ್ಲುಗಳನ್ನು ಮಾಡಿ ಡ್ರಾ ಮಾಡಿದ್ದಾರೆ. ಆದುದರಿಂದ ನಿಜವಾಗಿ ಅನ್ಯಾಯ ನಡೆದಿದೆ. ಇದನ್ನು ತನಿಖೆ ಮಾಡಿಸುತ್ತೀರಾ?

V-,31'N73
N74-17-1-4

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಇಂತಿಂಥ ಕೆರೆಯಲ್ಲಿ ಇಂಥ ತಪ್ಪು ಕೆಲಸ ನಡೆದಿದೆ ಅಂತ ಹೇಳಿದರೆ ಈಗಲೇ ಮಾನ್ಯ ಸದಸ್ಯರನ್ನು ಮೋಟಾರ್‌ನಲ್ಲಿ ಕೂಡಿಸಿ ಅಲ್ಲಿಗೆ ಇನ್‌ವೆಸ್ಟಿಗೇಷನ್ ಮಾಡುವವರ ಜೊತಗೆ ಕಳುಹಿಸಿಕೊಡುತ್ತೇನೆ. ನಾಳೆ ಸಾಯಂಕಾಲದೊಳಗೆ ಈ ಸಭೆಗೆ ವರದಿ ತರಿಸಿ ಕೊಡುತ್ತೇನೆ.

ಶ್ರೀಮತಿ ರಾಧಾ ಭಟ್.—ಆದಷ್ಟು ಶೀಘ್ರವಾಗಿ ಕೆರೆಗಳನ್ನು ಸರಿಪಡಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಏನನ್ನು ಸರಿಪಡಿಸಬೇಕು, ಯಾವ ಕೆರೆ ರಿಪೇರಿ ಆಗಬೇಕು ಎಂದು ನಿರ್ದಿಷ್ಟವಾಗಿ ಹೇಳಿದರೆ, ರಿಪೇರಿ ಆಗಬೇಕಾಗಿದ್ದರೆ ಅಗತ್ಯವಾಗಿ ಮಾಡಿಸಿಕೊಡುತ್ತೇನೆ.

SCARCITY OF INDUSTRIAL SHEDS IN S.K. DISTRICT

1017. Smt. ADDY SALDHANA (Mangalore).—Will the Minister for Industries be pleased to state:—

(*a*) whether it has come to the knowledge of the Government that there is acute shortage of Industrial sheds for setting up small scale industries at South Kanara District;

(*b*) if so, the measures envisaged to overcome this shortage?

Sri. S. M. KRISHNA.—Minister for Industries.

(*a*) Yes.

(*b*) 39 sheds are existing at Yeyyadi Industrial estate.

A new Industrial Estate is being started at Bykampadi. 22 sheds are under construction in Bykampadi Indusirial estate.

Some more sheds are proposed to be taken up during 1973–74.

Smt. ADDY SALDHANA.— May I know whether the Government is prepared to give subsidy facilities?

†Sri S. M. KRISHNA.—Government is willing to provide sheds for those who would like to set up small industries; in Mangalore we have 39 sheds and we have given 26 plots as of today. 22 sheds are being constructed in Bykampadi.